**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,ಯವರ ನ್ಯಾಯಾಲಯ**
**ಟಿ.ನರಸೀಪುರ**

**ಸಿಸಿ ನಂಃ 1938/2025**

**ಸಿಡಬ್ಲ್ಯೂ-1 ಪಿಡಬ್ಲ್ಯೂ-1**

| | | |
|---|---|---|
| ಸಾಕ್ಷಿದಾರರ ಹೆಸರು | : | ರವಿ |
| ತಂದೆಯ ಹೆಸರು | : | ಕಾಮರಾಜು |
| ವಯಸ್ಸು | : | 38 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಕಲಿಯೂರು ಗ್ರಾಮ. |

**ಸಾಕ್ಷಿಗೆ ದಿನಾಂಕಃ 05.02.2026 ರಂದು ಪ್ರಮಾಣ ಮಾಡಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಆರೋಪಿಗಳು ನನಗೆ ಸಂಬಂಧಿಕರು. ಚಾಸಾ.2 ಸಹೋದರ, ಚಾಸಾ.3 ಸಹೋದರಿ, ಚಾಸಾ.4 ಅಕ್ಕನ ಮಗಳು, ಚಾಸಾ.5 ತಂದೆ, ಚಾಸಾ.6 ಅತ್ತಿಗೆ. ದಿ.11.07.2025 ರಂದು ಬೆಳಿಗ್ಗೆ 9.00 ಗಂಟೆಯ ಸಮಯದಲ್ಲಿ ಆರೋಪಿಗಳು ನಮಗೆ ಸೇರಿದ ಜಾಗವನ್ನು ಸ್ವಚ್ಛ ಮಾಡುತ್ತಿರುವಾಗ ಅದ್ಧನು ಕೇಳಲು ಹೋದ ನನಗೆ 1 ನೇ ಆರೋಪಿಯು ಮಚ್ಚಿನಿಂದ ನನಗೆ ಹೊಡೆಯಲು ಬಂದಾಗ, ಚಾಸಾ.3 ರವರು ಮಚ್ಚನ್ನು ಕಿತ್ತುಕೊಂಡು ಬಿಸಾಕಿರುತ್ತಾರೆ. ನಂತರ 1 ನೇ ಆರೋಪಿಯು ಕೆಳಕ್ಕೆ ಕೆಡವಿಕೊಂಡು ಕೈಬೆರಳಿನಿಂದ ನನ್ನ ಕಣ್ಣಿಗೆ ತಿವಿದಿದ್ದು, ನಂತರ ಬಲಗೆನ್ನೆಗೆ, ಬಲಬುಜಕ್ಕೆ ಮತ್ತು ಎದೆಯ ಭಾಗಕ್ಕೆ ಕಚ್ಚಿರುತ್ತಾರೆ. ಚಾಸಾ.4 ರವರು ಮೊಬೈಲ್ ನಿಂದ ವೀಡಿಯೋ ಮಾಡುತ್ತಿದ್ದಾಗ 1 ನೇ ಆರೋಪಿಯು ಮೊಬೈಲ್ ನ್ನು ಕಿತ್ತುಕೊಂಡು ಬಿಸಾಕಿರುತ್ತಾರೆ. ನಂತರ ಚಾಸಾ.5 ರವರು ಕೇಳಲು ಬಂದಾಗ 1 ನೇ ಆರೋಪಿಯು ಅವರ ಕುತ್ತಿಗೆಯನ್ನು ಹಿಡಿದುಕೊಂಡಿರುತ್ತಾನೆ. ಚಾಸಾ.2 ರವರು ಚಾಸಾ.5 ರವನ್ನು ಬಿಡಿಸಲು ಬಂದಾಗ ಚಾಕುವಿನಿಂದ ಬಲಭಾಗದ ಕಿವಿಗೆ ಮತ್ತು ಎಡಕೈಗೆ ಹೊಡೆದು ರಕ್ತಗಾಯಪಡಿಸಿರುತ್ತಾರೆ. ಬಲಗಣ್ಣಿನ ಕೆಳಭಾಗದಲ್ಲಿ ಚಾಕುವಿನಿಂದ ಗೀರಿ ಗಾಯಪಡಿಸಿರುತ್ತಾರೆ. ಚಾಸಾ.6 ರವರು ಚಾಸಾ.2 ರವರನ್ನು ಬಿಡಿಸಲು ಹೋದಾಗ ಬಲಗಾಲಿಗೆ ಚಾಕುವಿನಿಂದ ಹೊಡೆದಿರುತ್ತಾರೆ. ಚಾಸಾ.6 ರವರನ್ನು

ಬಿಡಿಸಲು ಹೋದಾಗ 1 ನೇ ಆರೋಪಿಯು ನನಗೆ ನನ್ನ ಬಲಗೈಗೆ ಮೂಗು ಮತ್ತು ಎಡ ಹಣೆಗೆ ಚಾಕುವಿನಿಂದ ಹೊಡೆದು ರಕ್ತಗಾಯಪಡಿಸಿರುತ್ತಾರೆ. 2 ನೇ ಆರೋಪಿಯು ಜಗಳ ಆಡಲು ಕುಮ್ಮಕ್ಕು ನೀಡಿರುತ್ತಾರೆ. ನಂತರ ತಲಕಾಡು ಆಸ್ಪತ್ರೆಗೆ ಹೋಗಿ ಹೆಚ್ಚಿನ ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆಗೆ ಟಿ.ನರಸೀಪುರಕ್ಕೆ ಬಂದಿರುತ್ತೇವೆ. ನಂತರ ಪೋಲಿಸರಿಗೆ ಆಸ್ಪತ್ರೆಯಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ.

ದಿ.22.07.2025 ರಂದು ಮಧ್ಯಾಹ್ನ 2.00 ಗಂಟೆ ಮಹಜರ್ ಗಾಗಿ ಪೋಲಿಸರು ಬಂದಿದ್ದು ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಚಾಸಾ.7 ಮತ್ತು 8 ರವರ ಸಮಕ್ಷಮ ಮಹಜರ್ ನ್ನು ಜರುಗಿಸಿ ಒಂದು ಮಚ್ಚು ಮತ್ತು 2 ಚಾಕುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಮಹಜರ್ ಸಮಯದಲ್ಲಿ ಪೋಲಿಸರು ಫೋಟೋಗಳನ್ನು ತೆಗೆದಿರುತ್ತಾರೆ. ನಂತರ ನಾನು ಪೋಲಿಸರಿಗೆ ಮುಂದುವರೆದು ಹೇಳಿಕೆಯನ್ನು ಹೇಳಿರುತ್ತೇನೆ. ಸಾಕ್ಷಿಯು ಹೇಳಿಕೆ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.1 ಎಂದು, ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.1(ಎ) ಎಂದು, ಸಾಕ್ಷಿಯು ಮಹಜರ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.2 ಎಂದು, ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.2(ಎ) ಎಂದು, ಸಾಕ್ಷಿಯು ಮಹಜರ್ ಸಮಯದಲ್ಲಿ ತೆಗೆದ 6 ಫೋಟೋಗಳನ್ನು ನೋಡಿ ಗುರುತಿಸಿದ್ದು, ಅದನ್ನು ಒಟ್ಟಾಗಿ ನಿ.ಪಿ.3 ಎಂದು ಗುರುತಿಸಲಾಯಿತು. ಒಂದು ಸಿ.ಡಿ.ಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.4 ಎಂದು ಗುರುತಿಸಲಾಯಿತು. ನ್ಯಾಯಾಲದ ಮುಂದಿರುವ ಒಂದು ಮಚ್ಚು ಮತ್ತು 2 ಚಾಕುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ಮು.ಮಾ.1 ಎಂದು ಗುರುತಿಸಲಾಯಿತು.

**(ಆರೋಪಿಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲಿಗೆ ಮುಂದೂಡಲಾಯಿತು.)**

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ಟಿ.ನರಸೀಪುರ**